# 107

**II**

Total No. of Questions – 15

Total No. of Printed Pages – 4

Regd. No. | | | | | | | | | | |

**Part - II**

**KANNADA, Paper – I**

**(Second Language)**

Time : 3 Hours] [Max. Marks : 100

I. ಈ ಕೆಳಗಿನ ಪದ್ಯಗಳಲ್ಲಿ ಯಾವುದಾದರೂ **ಒಂದಕ್ಕೆ** ಭಾವಾರ್ಥ ಬರೆಯಿರಿ. 1 × 6 = 6

ರತ್ನದ ಸಂಕೋಲೆಯಾದಡೆ ತೊಡರಲ್ಲವೆ ?
ಮುತ್ತಿನ ಬಲೆಯಾದಡೆ ಬಂಧನವಲ್ಲವೆ ?
ಚಿನ್ನದ ಕತ್ತಿಯಲ್ಲಿ ತಲೆಹೊಯ್ದಡೆ ಸಾಯದಿರ್ಪರೆ ?
ಲೋಕದ ಭಜನೆಯ ಭಕ್ತಿಯಲ್ಲಿ ಸಿಲುಕಿದಡೆ
ಜನನ ಮರಣ ಬಿಡುವುದೇ ಚೆನ್ನಮಲ್ಲಿಕಾರ್ಜುನಾ ?

**ಅಥವಾ**

ನನ್ನನ್ನೊಮ್ಮೆ ಕ್ಷಮಿಸು ಬಿಡು ದೇವರೆ
ಧರೆ ಮೇಲೆ ಉರಿಪಾದ ಊರಿ ನಡೆದಂತೆಲ್ಲಾ
ಯಾರೂ ನನ್ನ ತಲೆಯ ಮೇಲೂ ನಡೆದಂತಾಗುತ್ತದೆ
ಜಗದ ಅಗಲದ ನಡುವಿಂದ ಯಾರೇ ಕರೆದರು
ಬಂದೂಕು, ಬಾಂಬ್ ಎಂತಲೆ ಕೇಳಿಸುತ್ತಿದೆ ನನಗೆ.

II. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ** 20 ವಾಕ್ಯ ಮೀರದಂತೆ ಉತ್ತರಿಸಿ. 1 × 6 = 6

(1) "ರನ್ನನ ದುರ್ಯೋಧನನು ಉತ್ತಮ ಗುಣಗಳ ಸಂಪತ್ತಿನ ನಿಧಿ" ಎನ್ನುವ ಮಾತನ್ನು ಪ್ರಸ್ತುತ ಪದ್ಯದ ಸನ್ನಿವೇಶದಿಂದ ಸ್ಪಷ್ಟೀಕರಿಸಿರಿ.

(2) ಪ್ರಕೃತಿಯ ಸರ್ವಶಕ್ತಿಯ ಎದುರು ಮಾನವನ ಶಕ್ತಿ ಸಾಮರ್ಥ್ಯಗಳ ಮಿತಿಯನ್ನು ಕವಿತೆ ಹೇಗೆ ಸ್ಪಷ್ಟಪಡಿಸುತ್ತಿದೆ ?

III. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ 20** ವಾಕ್ಯ ಮೀರದಂತೆ ಉತ್ತರಿಸಿ. **1 × 6 = 6**

(1) ಶಾಸ್ತ್ರೀ ಮಾಸ್ತರರ ವ್ಯಕ್ತಿತ್ವವನ್ನು ನಿರೂಪಿಸಿ ಬರೆಯಿರಿ.

(2) ನಿರಾಕರಣೆ ಕತೆಯಲ್ಲಿ ಬರುವ ಶಕುಂತಲೆ ವ್ಯಕ್ತಿತ್ವವನ್ನು ವಿವರಿಸಿ.

IV. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ 20** ವಾಕ್ಯ ಮೀರದಂತೆ ಉತ್ತರಿಸಿ. **1 × 6 = 6**

(1) ಬೋಳೇಶಂಕರ ಮತ್ತು ಅವನ ಅಣ್ಣಂದಿರನ್ನು ಭಾಗವತರು ಹೇಗೆ ಪರಿಚಯಿಸುತ್ತಾರೆ ?

(2) 'ಹಸಿರೇ ಉಸಿರು' ಎಂಬುದನ್ನು ಬೋಳೇಶಂಕರನ ಪಾತ್ರದ ಮೂಲಕ ನಾಟಕಕಾರರು ಹೇಗೆ ಸ್ಪಷ್ಟಪಡಿಸಿದ್ದಾರೆ ? ವಿಮರ್ಶಿಸಿ.

V. ಈ ಕೆಳಗಿನ ನಾಲ್ಕರಲ್ಲಿ ಯಾವುದಾದರೂ **ಎರಡಕ್ಕೆ** ಸಂದರ್ಭ ಸೂಚಿಸಿ ವಿವರಿಸಿ. **2 × 3 = 6**

(1) ಮುತ್ತಿನ ಬಲೆಯಾದಡೆ ಬಂಧನವಲ್ಲವೆ ?

(2) ನೃಪತುಂಗನೆ ಚಕ್ರವರ್ತಿ ! ಪಂಪನಲ್ಲಿ ಮುಖ್ಯಮಂತ್ರಿ !

(3) ನೆನಪುಗಳು ಮಳೆಯಂತೆ ಸುರಿಯತೊಡಗಿದವು

(4) ಪತ್ನಿ ಪುತ್ರರನಾಥರ್ರಾದವರಿಗಿನ್ನೆನು ಗತಿ

VI. ಈ ಕೆಳಗಿನ ನಾಲ್ವರು ಕವಿ/ಲೇಖಕರಲ್ಲಿ **ಇಬ್ಬರ** ಪರಿಚಯ ಬರೆಯಿರಿ. **2 × 3 = 6**

(1) ರನ್ನ (2) ಎಚ್.ಎಲ್. ಪುಷ್ಪ

(3) ವೀಣಾ ಶಾಂತೇಶ್ವರ (4) ಎಚ್. ನರಸಿಂಹಯ್ಯ

VII. ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. **2 × 3 = 6**

(1) ಸೀತೆಯನ್ನು ಕಾಡಿನ ಪ್ರಾಣಿಗಳು ಹೇಗೆ ಉಪಚರಿಸಿದವು ?

(2) ರಾಕ್ಷಸಗಣ ಹತ್ಯೆಗೆ ಜನತೆ ಹೇಗೆ ಹೆಜ್ಜೆ ಇಡಬೇಕು ?

(3) ಭೂಮಿ ಕಂಪಿಸಿದಾಗ ಏನೇನಾಯಿತು ?

(4) ಅಲ್ಲಮ ಏನನ್ನು ನೀಡುವುದರಿಂದ ನಾದೇವ ಎಂದು ಹೇಳುತ್ತಾನೆ ?

VIII. ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. $2 \times 3 = 6$

(1) ಗಾಂಧಿಯನ್ನು ಪರೀಕ್ಷೆ ಮಾಡಿದ ವೈದ್ಯರು ನಿಂಗಮ್ಮನಿಗೇಳಿದ ಮಾತುಗಳೇನು ?

(2) ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪುಗೊಳ್ಳುತ್ತವೆ ?

(3) ಮಾಸ್ತರರು ಬಾಡಿಗೆ ಮನೆಯನ್ನು ಹೇಗೆ ಖರೀದಿಸಿದ್ದರು ?

(4) ಅಪರಾಜಿತಾ ಬಳ್ಳಿಯ ಗುಣ ಯಾವುದು ?

IX. ಈ ಕೆಳಗಿನ ನಾಲ್ಕು ಪ್ರಶ್ನೆಗಳಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. $2 \times 3 = 6$

(1) ಬೋಳೇಶಂಕರ ಏನೆಂದು ಡಂಗುರ ಸಾರಿಸುತ್ತಾನೆ ?

(2) ಸೈತಾನನು ಮೂರು ಪಿಶಾಚಿಗಳನ್ನು ಭೂಮಿಗೆ ಕಳುಹಿಸಿದ್ದೇಕೆ ?

(3) ರಾಜಕುಮಾರಿಯ ಹೊಟ್ಟೆನೋವು ವಾಸಿ ಮಾಡುವವರಿಗೆ ಏನೇನು ಬಹುಮಾನ ಕೊಡುವುದಾಗಿ ಹೇಳುತ್ತಾರೆ ?

(4) ಸಾವ್ಕಾರಣ್ಣನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದ ?

X. ಈ ಕೆಳಗಿನ ಎರಡರಲ್ಲಿ **ಒಂದನ್ನು** ಕುರಿತು ಪತ್ರ ಬರೆಯಿರಿ. $1 \times 6 = 6$

(1) ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡಲು ತಹಸೀಲ್ದಾರರಿಗೊಂದು ಪತ್ರ ಬರೆಯಿರಿ.

(2) ಮೂರು ರಜೆ ಕೋರಿ ತರಗತಿಯ ಉಪನ್ಯಾಸಕರಿಗೊಂದು ಪತ್ರ ಬರೆಯಿರಿ.

XI. (A) ಈ ಕೆಳಗಿನ ಎಂಟು ಸಂಧಿ ಪದಗಳಲ್ಲಿ **ನಾಲ್ಕಕ್ಕೆ** ಸಂಧಿ ಬಿಡಿಸಿ, ಸಂಧಿಯನ್ನು ಹೆಸರಿಸಿ. $4 \times 2 = 8$

(1) ನಾವೆಲ್ಲಿ (2) ಹುಳುವಾಗು (3) ಮನೆಗೆಲಸ (4) ಸುರಾಸುರ

(5) ರಾಜೋಪಚಾರ (6) ಪಿತ್ರಾರ್ಜಿತ (7) ವಾಗ್ದಾನ (8) ಸನ್ಮಾರ್ಗ

(B) ಈ ಕೆಳಗಿನ ಆರು ಸಮಾಸ ಪದಗಳಲ್ಲಿ **ಮೂರಕ್ಕೆ** ಸಮಾಸ ಬಿಡಿಸಿ, ಸಮಾಸವನ್ನು ಹೆಸರಿಸಿ. $3 \times 2 = 6$

(1) ಬೆಳ್ದಾವರೆ (2) ವ್ಯಾಘ್ರಭಯ (3) ಈ ಹೊಲ

(4) ಒಕ್ಕಣ್ಣು (5) ಕಂದ ಮೂಲ ಫಲಗಳು (6) ಚಕ್ರಪಾಣಿ

(C) ಈ ಕೆಳಗಿನ ಎಂಟು ಪದಗಳಲ್ಲಿ **ಐದಕ್ಕೆ** ಅರ್ಥ ಬರೆಯಿರಿ. $5 \times 1 = 5$

(1) ನೀಲಲತಾ (2) ಮೊನೆಯೊಳ್ (3) ಕುಡಿತೆ (4) ತೊಡರು

(5) ಜಲ್ಪನೆ (6) ಮೂಸೆ (7) ಕರಂಡ (8) ವತ್ಸರ

XII. ಈ ಕೆಳಗಿನವುಗಳಲ್ಲಿ **ಒಂದನ್ನು** ಕುರಿತು ಪ್ರಬಂಧ ಬರೆಯಿರಿ. 1 × 6 = 6

(1) ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು.

(2) ಆನ್‌ಲೈನ್ ಪಾಠದ ಆಗು – ಹೋಗುಗಳು.

(3) ಕಾಯಕದ ಮಹತ್ವ.

XIII. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 5 × 1 = 5

(1) ಕಟ್ಪೋಗರದ ಮೊಟ್ಟೆಯನ್ನು ಎಲ್ಲಿ ಕಟ್ಟಲಾಗಿದೆ ?

(2) ಕಾಡಿನಲ್ಲಿ ತನಗೆ ಯಾರ ನೆರವುಂಟೆಂದು ಸೀತೆ ಹೇಳುತ್ತಾಳೆ ?

(3) ಅರಗಿಳಿಗೆ ಯಾವ ಬಣ್ಣವನ್ನು ಬರೆಯಲಾಗಿದೆ ?

(4) ಕಡಲನ್ನು ಕಡೆದಾಗ ಏನು ಬಂತು ?

(5) ಮಾಯವಾಗಿರುವ ದ್ವೀಪ ಯಾವುದು ?

XIV. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 5 × 1 = 5

(1) ಹುಡುಗನಿಗೆ ಮಹಾತ್ಮ ಗಾಂಧಿ ಎಂಬ ಹೆಸರಿಟ್ಟವರು ಯಾರು ?

(2) ಜ್ಯೋತಿಷ್ಯ ಮುಗ್ಧ ಜನರನ್ನು ಹೇಗೆ ಶೋಷಿಸುತ್ತದೆ ?

(3) ಗಾಡಿ ಶಹಾಬಾದಿಗೆ ಬಂದಾಗ ಸಮಯ ಎಷ್ಟಾಗಿತ್ತು ?

(4) ಶಕುಂತಲೆ ಯಾರ ಶ್ರೇಯಸ್ಸಿಗೆ ಅರಮನೆಗೆ ಬಂದಿದ್ದಾಳೆ ?

(5) ನರಿ ಯಾವ ಹೊಡೆತಕ್ಕೆ ಪ್ರಾಣ ಬಿಟ್ಟಿತು ?

XV. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 5 × 1 = 5

(1) ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಉಂಟಾದ ಆಸೆ ಯಾವುದು ?

(2) ಬೋಳೇಶಂಕರ ಎಲ್ಲಿ ಕುಳಿತು ಊಟ ಮಾಡಬೇಕೆಂದು ಅತ್ತಿಗೆ ಹೇಳುತ್ತಾಳೆ ?

(3) ಸೈನಿಕರು ಯಾವುದಕ್ಕೆ ಜಯವಾಗಲಿ ಎಂದು ಹಾಡಿದರು ?

(4) ಪಿಶಾಚಿಗಳು ಯಾರ ಹೆಸರು ಕೇಳಿದರೆ ಹೆದರುತ್ತವೆ ?

(5) ಬೋಳೇಶಂಕರನ ಹೊಟ್ಟೆನೋವು ಯಾವುದರಿಂದ ಮಾಯವಾಯಿತು ?